## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿನ ಪ್ರಶ್ನೆ | : | 134 |
| 2. | ಸದಸ್ಯರ ಹೆಸರು | : | ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮನಿರ್ದೇಶನ ಹೊಂದಿದವರು) |
| 3. | ಉತ್ತರಿಸಬೇಕಾದ ದಿನಾಂಕ | : | 05.12.2023 |
| 4. | ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು. |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ವಿಜಯಪುರ ಜಿಲ್ಲೆಯಲ್ಲಿ ವಿಮಾನ ನಿಲ್ದಾಣದ ಕಾಮಗಾರಿ ಯಾವ ಹಂತದಲ್ಲಿದೆ; | ವಿಜಯಪುರ ವಿಮಾನನಿಲ್ದಾಣವನ್ನು Airbus-320 ಮಾದರಿಯ ವಿಮಾನಗಳ ಕಾರ್ಯಾಚರಣೆಗೆ ಅನುವಾಗುವಂತೆ ರೂ.347.92 ಕೋಟಿಗಳ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ಸದರಿ ಕಾಮಗಾರಿಗಳಿಗೆ ಪ್ರಸ್ತುತದವರೆಗೆ ರೂ.347.92 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಸದರಿ ವಿಮಾನನಿಲ್ದಾಣದ ಪ್ಯಾಕೇಜ್-1ರ ಕಾಮಗಾರಿಗಳು ಫೆಬ್ರುವರಿ-2021ರಿಂದ ಪ್ರಗತಿಯಲ್ಲಿದ್ದು, ಶೇ.91ರಷ್ಟು ಪೂರ್ಣಗೊಂಡಿರುತ್ತದೆ. ಪ್ಯಾಕೇಜ್-2ರ ಕಾಮಗಾರಿಗಳು ಏಪ್ರಿಲ್-2022ರಿಂದ ಪ್ರಗತಿಯಲ್ಲಿದ್ದು, ಶೇ.82ರಷ್ಟು ಪೂರ್ಣಗೊಂಡಿರುತ್ತದೆ. ಪ್ಯಾಕೇಜ್-3ರ ಕಾಮಗಾರಿಗಳು ಅಕ್ಟೋಬರ್-2022ರಿಂದ ಪ್ರಗತಿಯಲಿದ್ದು, ಶೇ.79ರಷ್ಟು ಪೂರ್ಣಗೊಂಡಿರುತ್ತದೆ. |
| (ಆ) | ವಿಮಾನ ನಿಲ್ದಾಣಕ್ಕಾಗಿ ವಶಪಡಿಸಿಕೊಂಡಿರುವ ಜಮೀನುಗಳೆಷ್ಟು; ಅವುಗಳಿಗೆ ನೀಡಿರುವ ಪರಿಹಾರದ ಮೊತ್ತ ಎಷ್ಟು; (ವಿವರ ನೀಡುವುದು) | ವಿಜಯಪುರ ವಿಮಾನನಿಲ್ದಾಣಕ್ಕಾಗಿ 727.01 ಎಕರೆ ಜಮೀನನ್ನು ಭೂಸ್ವಾಧೀನ ಪಡಿಸಕೊಳ್ಳಲಾಗಿರುತ್ತದೆ. ಇದುವರೆವಿಗೂ 351 ಎಕರೆ ಜಮೀನಿಗೆ ರೂ.31,92,07,415/-ಗಳ ಪರಿಹಾರವನ್ನು ಪಾವತಿಸಲಾಗಿದ್ದು, 28.08 ಎಕರೆ ಜಮೀನಿಗೆ ಮಾನ್ಯ ನ್ಯಾಯಾಲಯದಲ್ಲಿ ರೂ.2,25,39,193/-ಗಳನ್ನು ಠೇವಣಿ ಮಾಡಲಾಗಿದೆ.<br><br>ಭೂಸ್ವಾಧೀನಪಡಿಸಿಕೊಂಡಿರುವ ಒಟ್ಟು ಕ್ಷೇತ್ರದ 347-33 ಎಕರೆ ಜಮೀನು ಸರ್ಕಾರಿ ಜಮೀನಾಗಿರುತ್ತದೆ. |
| (ಇ) | ವಿಮಾನ ಹಾರಾಟವು ಯಾವಾಗ ಪ್ರಾರಂಭವಾಗಲಿದೆ? (ವಿವರ ನೀಡುವುದು) | ವಿಜಯಪುರ ವಿಮಾನನಿಲ್ದಾಣದ ಕಾಮಗಾರಿಗಳು ಫೆಬ್ರುವರಿ-2024ರಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ. |

ಸಂಖ್ಯೆ: ಮೂಅಇ 200 ರಾಅವಿ 2023

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ, ಸಚಿವರು